ಕೆ.ವಿ. ತಿರುಮಲೇಶ್

# ಮಕ್ಕಳ ಕವಿತೆಗಳು



## ರೋ ಮತ್

ಸ್ಕೂಲಿದೆ ಈ ದಿನ ತಲೆನೋವಂತ
ಹೋ ಅಂತಳುತಾನ್ ಕಿಟ್ಟ
ರೋ ಮತ್ ಅಂತಾನ್ ಪುಟ್ಟ
ರೋ ಮತ್ ಅಂದರೆ ಮತ್ ಮತ್ ಅಳು ಅಂತ
ತಿಳಕೊಂಡಾನೆ ಕಿಟ್ಟ

ಸ್ಕೂಲಿದೆ ಈ ದಿನ ಹೊಟ್ಟೆನೋವಂತ
ಹೋ ಅಂತಳುತಾನ್ ಕಿಟ್ಟ
ರೋ ಮತ್ ಅಂತಾನ್ ಪುಟ್ಟ
ರೋ ಮತ್ ಅಂದರೆ ಮತ್ ಮತ್ ಅಳು ಅಂತ
ತಿಳಕೊಂಡಾನೆ ಕಿಟ್ಟ

ಸ್ಕೂಲಿದೆ ಈ ದಿನ ಬೆನ್ನೋವಂತ
ಹೋ ಅಂತಳುತಾನ್ ಕಿಟ್ಟ
ರೋ ಮತ್ ಅಂತಾನ್ ಪುಟ್ಟ
ರೋ ಮತ್ ಅಂದರೆ ಮತ್ ಮತ್ ಅಳು ಅಂತ
ತಿಳಕೊಂಡಾನೆ ಕಿಟ್ಟ

ರೋ ಮತ್ ಅಂದರೆ ಮತ್ ಮತ್ ಅಳುತೀ
ಏನಂತ ತಿಳಕೊಂಡ್ಯೋ ಕಿಟ್ಟ
ಹಿಂದೀಲಿ ಅಳಬೇಡ ಕನ್ನಡದಲ್ಲಳು ಅಂತ
ಬೆನ್ನಿಗೊಂದು ಗುದ್ದಿದ ಪುಟ್ಟ
ಸಿರಿಗನ್ನಡದಲ್ಲಿ ಶುರುಮಾಡಿದ ಕಿಟ್ಟ